ಸಂಖ್ಯೆ/ ಬಿಎಲ್‌ಡಿ/ ಎಲ್.ಎನ್.ಡಿ/1/2007-೦8

ಪೊಲೀಸ್ ಅಧೀಕ್ಷಕರವರ ಕಛೇರಿ,
ಮೈಸೂರು ಜಿಲ್ಲೆ,
ಮೈಸೂರು, ದಿನಾಂಕ:20.09.2007

## ಅಧಿಕೃತ ಜ್ಞಾಪನ

ವಿಷಯ:- ಮೈಸೂರು ನಗರದ ಸಿಟಿ ಸರ್ವೆ ಸಂಖ್ಯೆ 2640 ರಲ್ಲಿರುವ 1,74,113.0 ಚ.ಮೀ. ವೀಸ್ತೀರ್ಣದ ಪೊಲೀಸ್ ಇಲಾಖೆಗೆ ಸೇರಿದ ಸರ್ಕಾರಿ ಜಮೀನಿನಲ್ಲಿ 84,301.67 ಚ.ಮೀ. ವಿಸ್ತೀರ್ಣದ ಜಮೀನನ್ನು ಕರ್ನಾಟಕ ಸ್ಟೇಟ್ ಪೊಲೀಸ್ ವೆಲ್‌ಫೇರ್ & ಎಜ್ಯುಕೇಷನ್ ಟ್ರಸ್ಟ್‌ಗೆ ವರ್ಗಾವಣೆ ಮಾಡಿರುವ ಬಗ್ಗೆ.

ಉಲ್ಲೇಖ:-
1. ಮೈಸೂರು ಸರ್ಕಾರದ ನಡಾವಳಿ ಆದೇಶ ಸಂಖ್ಯೆ. ಹೆಚ್.ಬಿ.100/19-23-ಮಿಲಿ-207-48-56 ಬೆಂಗಳೂರು, ದಿನಾಂಕ: 27-01-1951.
2. ಮೈಸೂರು ಸರ್ಕಾರದ ಕಾರ್ಯದರ್ಶಿರವರ ಪತ್ರ ಸಂಖ್ಯೆ ಹೆಚ್.ಬಿ.11532-3/ಮಿಲಿ, ದಿನಾಂಕ: 14-03-1951.
3. ಮೈಸೂರು ಸರ್ಕಾರದ ಆದೇಶ ಸಂಖ್ಯೆ. ಹೆಚ್.ಬಿ 1699-708-ಮಿ.ಲಿ, 143, 49, 38, ದಿನಾಂಕ 30.05.1951
4. ಮೈಸೂರು ಸರ್ಕಾರದ ಆದೇಶ ಸಂಖ್ಯೆ ಹೆಚ್.ಡಿ 54, ಇಹೆಚ್‌ಟಿ 57, ದಿನಾಂಕ 20.10.1958

* * * * * *

ಮೈಸೂರು ನಗರದ ಸಿಟಿ ಸರ್ವೇ ನಂ 2640 ರಲ್ಲಿರುವ 1,74,113.0 ಚ.ಮೀ. ವೀಸ್ತೀರ್ಣದಲ್ಲಿರುವ ಖಾಲಿ ನಿವೇಶನ ಮತ್ತು ಕಟ್ಟಡಗಳು ಪೊಲೀಸ್ ಇಲಾಖೆಗೆ ಸೇರಿರುವ ಆಸ್ತಿಯಾಗಿದ್ದು, ಸದರಿ ವಿಸ್ತೀರ್ಣದಲ್ಲಿ 84,301.67 ಚ.ಮೀ. (ಸುಮಾರು 21 ಎಕರೆ) ಭೂಮಿಯನ್ನು ಕರ್ನಾಟಕ ಸ್ಟೇಟ್ ಪೊಲೀಸ್ ವೆಲ್‌ಫೇರ್ & ಎಜ್ಯುಕೇಷನ್ ಟ್ರಸ್ಟ್‌ನ ಶಾಲಾ ಕಟ್ಟಡವನ್ನು ಪ್ರಾರಂಭಿಸಲು ಉದ್ದೇಶಿಸಿ, ಸದರಿ ಭೂಮಿಯನ್ನು ಕರ್ನಾಟಕ ಸ್ಟೇಟ್ ಪೊಲೀಸ್ ವೆಲ್‌ಫೇರ್ & ಎಜ್ಯುಕೇಷನ್ ಟ್ರಸ್ಟ್‌ನ ಹೆಸರಿಗೆ ವರ್ಗಾಯಿಸಲು ದಿನಾಂಕ 18.09.2007 ಅಧಿಕಾರಿಗಳ ಸಭೆಯಲ್ಲಿ ಒಮ್ಮತದಿಂದ ತೀರ್ಮಾನಿಸಲಾಯಿತು.

ಮೈಸೂರು ನಗರದ ಸಿಟಿ ಸರ್ವೆ ಸಂಖ್ಯೆ 2634, 2635, 2636, 2640 ಪೊಲೀಸ್ ಇಲಾಖೆಗೆ ಸೇರಿರುವ ಆಸ್ತಿಯಾಗಿದ್ದು, ಸಿಟಿ ಸರ್ವೆ ಸಂಖ್ಯೆ 2640 ರಲ್ಲಿ 84,301.67 ಚ.ಮೀ. (ಸುಮಾರು 21 ಎಕರೆ) ಭೂಮಿಯು ಉದ್ದೇಶಿತ ಯೋಜನೆಗೆ ಸೂಕ್ತವಾಗಿದ್ದು, ಮೈಸೂರು ನಗರದಲ್ಲಿ ಪೊಲೀಸ್ ಇಲಾಖೆಯ ಮಕ್ಕಳಿಗಾಗಿ ಶಾಲಾ ಕಟ್ಟಡ ಕಟ್ಟಲು ಬೇಕಾದಂತಹ ಜಮೀನು ಇಷ್ಟು ಪ್ರಮಾಣದಲ್ಲಿ ಬೇರೆ ಎಲ್ಲೂ ಲಭ್ಯವಿಲ್ಲದಿರುವುದರಿಂದ ಹಾಗೂ ಸದರಿ ಜಮೀನು ಕರ್ನಾಟಕ ಸ್ಟೇಟ್ ಪೊಲೀಸ್ ವೆಲ್‌ಫೇರ್ & ಎಜ್ಯುಕೇಷನ್ ಟ್ರಸ್ಟ್ ಶಾಲಾ ಕಟ್ಟಡದ ಉದ್ದೇಶಕ್ಕೆ ವರ್ಗಾಯಿಸಲು ಯಾರಿಂದಲೂ ತಂಟೆ ತಕರಾರುಗಳು ಇಲ್ಲದಿರುವುದರಿಂದ ಮೇಲ್ಕಂಡ ಉದ್ದೇಶಕ್ಕೆ ಜಮೀನನ್ನು ವರ್ಗಾಯಿಸಲು ತೀರ್ಮಾನಿಸಲಾಯಿತು.

ಅದರಂತೆ ಮೈಸೂರು ನಗರದ ಸಿಟಿ ಸರ್ವೆ ಸಂಖ್ಯೆ 2640 ರಲ್ಲಿರುವ ಒಟ್ಟು 1,74,113.0 ಚ.ಮೀ ವಿಸ್ತೀರ್ಣದ ಜಮೀನಿನ ಪೈಕಿ 84,301.67 ಚ.ಮೀ (ಸುಮಾರು 21 ಎಕರೆ) ಭೂಮಿಯನ್ನು ಕರ್ನಾಟಕ ಸ್ಟೇಟ್ ಪೊಲೀಸ್ ವೆಲ್‌ಫೇರ್ & ಎಜ್ಯುಕೇಷನ್ ಟ್ರಸ್ಟ್ ಹೆಸರಿಗೆ ಈ ಕೆಳಕಂಡ ಷರತ್ತಿಗೆ ಒಳಪಡಿಸಿ ವರ್ಗಾಯಿಸಿ ಆದೇಶಿಸಿದೆ.

**ಷರತ್ತುಗಳು**

1. ಜಮೀನಿನ ಪೂರ್ಣ ಹಕ್ಕು ಪೊಲೀಸ್ ಇಲಾಖೆಗೆ ಸೇರಿದ್ದಾಗಿರುತ್ತದೆ.
2. ಜಮೀನನ್ನು ಯಾವ ಉದ್ದೇಶಕ್ಕೆ ವರ್ಗಾಯಿಸಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು.
3. ನಮ್ಮಿಂದ ಪೂರ್ವಾನುಮತಿ ಇಲ್ಲದೇ ಬೇರೆ ಯಾವುದೇ ಉದ್ದೇಶಕ್ಕೂ ಉಪಯೋಗಿಸತಕ್ಕದಲ್ಲ.
4. ಜಮೀನು ತಮಗೆ ಅವಶ್ಯಕತೆ ಇಲ್ಲದಿದ್ದಾಗ ಪೊಲೀಸ್ ಇಲಾಖೆಗೆ ಹಿಂದಿರುಗಿಸತಕ್ಕದ್ದು.
5. ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಯಾವುದೇ ತಿಳುವಳಿಕೆ ನೀಡದೆ ವರ್ಗಾವಣೆಯನ್ನು ರದ್ದುಪಡಿಸಲಾಗುವುದು.

**ಜಮೀನಿನ ಚೆಕ್ಕುಬಂದಿ**

1. ಉತ್ತರ : ಮಹದೇವಪುರ ರಸ್ತೆ
2. ದಕ್ಷಿಣ : ಪೊಲೀಸ್ ವಸತಿ ಗೃಹಗಳು
3. ಪೂರ್ವ : ಹಳ್ಳ (ಹೊರ ಚರಂಡಿ)
4. ಪಶ್ಚಿಮ : ಜಲಪುರಿ 'ಸಿ' ಬ್ಲಾಕ್ ಪೊಲೀಸ್ ವಸತಿ ಗೃಹಗಳು

ಪೊಲೀಸ್ ಅಧೀಕ್ಷಕರು,
ಮೈಸೂರು ಜಿಲ್ಲೆ.

ಗೆ,

ಕಾರ್ಯದರ್ಶಿಗಳು, ಕರ್ನಾಟಕ ಸ್ಟೇಟ್ ಪೊಲೀಸ್ ವೆಲ್‌ಫೇರ್ & ಎಜ್ಯುಕೇಷನ್ ಟ್ರಸ್ಟ್, ಮೈಸೂರು ರವರಿಗೆ.

ಪ್ರತಿಯನ್ನು ವಂದನೆಗಳೊಂದಿಗೆ ಅಧ್ಯಕ್ಷರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು , ದಕ್ಷಿಣ ವಲಯ, ಮೈಸೂರು ರವರಿಗೆ

ಕಛೇರಿ ಕಡತಕ್ಕೆ.

76

A1 ನಂ. 148924

# ಆಸ್ತಿ ಪ್ರಕಟನ ಪತ್ರದ ನಕಲು Copy of Propery Card

ಚಾಲ್ತಾ ನಂ.

| ವಿಭಾಗ ಸಂಖ್ಯೆ Division No. | ಕ್ಷೇತ್ರದ ಹೆಸರು Name of the area | ಸವಿಸ್ತಾರ ನಕಾಶೆಯ ಸಂಖ್ಯೆ P. T. Sheet No. | ನಗರ ಸರ್ವೆ ನಂಬರು City Survey No. | ವಿಸ್ತೀರ್ಣ ಚದರ ಮೀಟರುಗಳಲ್ಲಿ Area in Sq. Mts. | ಹಿಡುವಳಿ ಹಕ್ಕು Tenure | ಕಂದಾಯ Assessment |
|---|---|---|---|---|---|---|
| | ನ.ಬಾ. ಮೊಹಲ್ಲಾ | 227/B | 2640 | 174113.0 | - | — |

ಅನುಭೋಗದ ಹಕ್ಕುಗಳು
Ersements

ಆಸ್ತಿದಾರಕನ ಹೆಸರು
Name of the Hod: ಸರ್ಕಾರ ಪೋಲೀಸ್ ಇಲಾಖೆ

ಗುತ್ತಿಗೆದಾರ
Lease

ಇತರ ಭಾರಗಳು
Other encumbrances

ಇತರ ಷರಾ
Other Remarks

— ಸಹಿ —
~~ಭೂ ಮಾಪನ ಸಹಾಯಕ ಅಧಿಕಾರಿ~~
ನಗರ ಭೂ ಮಾಪನ (ಪಿ. ಆರ್. ಕಾರ್ಡ್ ಬರೆಯುವುದು)
ನ.ಭೂ.ಮಾ. ರು

| ದಿನಾಂಕ Date | ಹಕ್ಕಿನ ವ್ಯವಹಾರ Transaction | ಸಂಪುಟ ಸಂಖ್ಯೆ Vol. No. | ಹೊಸ ಆಸಿಧಾರ (ಧಾ) ಗುತ್ತಿಗೆದಾರ (ಗು) ಇತರ ಭಾರಗಳು Now Holder (H) Lessee (L) or Eneumbrances (E) | ಸಾಕ್ಷಿ ರುಜು Attestation |
|---|---|---|---|---|
| | | | | |

ಎಡಿ.ಎಲ್.ಆರ್. / ಸಮಾ. / ನ.ಭೂ. / ಟಿ.ಸಿ. ಕ್ರಮಾಂಕ : 32/02-03
ಅರ್ಜಿದಾರರ ಹೆಸರು : ಪೋಲೀಸ್ ಕಮೀಷನರ್ ಹುಬ್ಬಳ್ಳಿ-ಧಾರವಾಡ
ಅರ್ಜಿ ಹಾಕಿದ ದಿನಾಂಕ : 25-2-03
ನಕಲು ತಯಾರಿಸಿದವರು : [illegible]
ನಕಲು ಮೊಬಾಬಲ್ ಮಾಡಿದವರು : [illegible]
ನಕಲು ತಯಾರಾದ ದಿನಾಂಕ : 25-2-03
ನಕಲು ವಿತರಿಸಿದ ದಿನಾಂಕ : 25/2/03




"ನಕಲು"
[signature]
ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಹಾಗೂ
ಪದನಿಮಿತ್ತ ನಗರ ಭೂಮಾಪನ ಅಧಿಕಾರಿ
ಹು ಧಾ ನ ಭೂ. 25/2/03

Scanned with CamScanner

☎ : 428383
424079
Fax : 429012

ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆ, ಮೈಸೂರು - 570 005
OFFICE OF THE DEPUTY COMMISSIONER, Mysore District, Mysore- 570 005

ದಿನಾಂಕ 25.07.2003

ಸಂ. ಯುಎಲ್‌ಸಿ.ಪಿ.ಆರ್.57 /2003-2004

ಆಯುಕ್ತರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ,
ಮೈಸೂರು.

ಮಾನ್ಯರೆ,

ವಿಷಯ: ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೋರೇಷನ್ ಗೆ
ಮಹದೇವಪುರ ರಸ್ತೆಯಲ್ಲಿ ಪೆಟ್ರೋಲ್ ಬಂಕ್ ನಡೆಸಲು
ನಿವೇಶನ ಕುರಿತು.

ಉಲ್ಲೇಖ: ನಿಮ್ಮ ಪತ್ರ ಸಂಖ್ಯೆ: ಮೈ.ನ.ಪ್ರಾ. ಸಿಎನಿ.2003-2004
ದಿನಾಂಕ 22.02.2003.

ಉಲ್ಲೇಖಿಸಿರುವ ಪತ್ರದಲ್ಲಿ ಈರನಗೆರೆ ಸ.ನಂ. 128 ರ ಬಗ್ಗೆ ಮಾಹಿತಿ ಕೋರಿರುತ್ತೀರಿ. ಈ ಸ.ನಂ. ಬಗ್ಗೆ ನಗರ ಭೂಮಿತಿ ಕಾಯಿದೆಯಡಿಯಲ್ಲಿ ಯಾವುದೇ ಘೋಷಣೆ ಇರುವುದಿಲ್ಲ. ಆದರೆ ಪೋಲೀಸ್ ಆಯುಕ್ತರು ದಿನಾಂಕ 9.5.2003 ರಲ್ಲಿ ತಹಶೀಲ್ದಾರ್, ಮೈಸೂರು ರವರಿಗೆ ನೋಂದಣಿ ಸಂಖ್ಯೆ: 1907, 1951-1952 ರಲ್ಲಿ ಹಿಂದಿನ ಮಹಾರಾಜರು ಆದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ರವರು ಮೈಸೂರು, ರವರು ಸರ್ಕಾರಕ್ಕೆ ರೂ.23 ಲಕ್ಷಕ್ಕೆ ಕೆಲವು ಆಸ್ತಿಯನ್ನು ಮಾರಾಟ ಮಾಡಿದ್ದು, ಆಸ್ತಿ ಸಂಖ್ಯೆ:( ಬಿ)

ಉತ್ತರಕ್ಕೆ: ಮಹದೇವಪುರ ರಸ್ತೆ
ದಕ್ಷಿಣಕ್ಕೆ : ಚಾಮುಂಡಿ ವಿಹಾರ
ಪಶ್ಚಿಮಕ್ಕೆ : ಸರ್ಕಾರಿ ಭವನ
ಪೂರ್ವಕ್ಕೆ : ಹಳ್ಳ

ಈ ಮಧ್ಯೆ ಇರುವ ಜಮೀನು ಸೇರಿದೆ. ಸಿಟಿ ಸರ್ವೆ ಮ್ಯಾಪ್ ರಂತೆ 1,74,113 sq.mtrs. ಅಂದಾಜು 41 ಎಕರೆ ಜಮೀನು ಸರ್ಕಾರಿ ಪೋಲೀಸ್ ಇಲಾಖೆಯಿಂದು ದಾಖಲಾಗಿದೆ. ಈ ದಾಖಲೆಗಳನ್ನು ಆಧರಿಸಿ ಕರ್ನಾಟಕ ಸರ್ಕಾರದ ಪೋಲೀಸ್ ಇಲಾಖೆಯ ಒಡೆತನಿರುವುದು ಕಂಡುಬಂದಿರುವುದರಿಂದ ಈ ಬಗ್ಗೆ ಪೋಲೀಸ್ ಇಲಾಖೆಯವರನ್ನು ಸಂಪರ್ಕಿಸಲು ಕೋರಿದೆ.

ತಮ್ಮ ನಂಬುಗೆಯ,

ಜಿಲ್ಲಾಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

Scanned with CamScanner